ಶ್ರೀ ಎ. ಜಿ. ರಾಮಚಂದ್ರರಾವ್.—ಕಾಲೇಜು ಸ್ಥಾಪನೆ ಮಾಡತಕ್ಕ ವಿಷಯದಲ್ಲಿ ಪರ್ಯಾಲೋಚನೆ ವುದಕ್ಕೆ ಇನ್ನು ಅನೇಕ ವಿಷಯಗಳು ಇರುತ್ತವೆ.

ಶ್ರೀ ಕೊಟ್ರ ಬಸವನಗೌಡ.—ಬಳ್ಳಾರಿಯಲ್ಲಿ ಕಾಲೇಜು ಬೇಕೆಂದು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri A. G. RAMACHANDRA RAO.—That does not arise from this.

Establishment of a locally suited industry in Malavally Taluk.

Q.—726. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it is not a fact that the people of Malavalli are constantly representing before Government to start locally suited industry in this taluk to improve the economic conditions of the people ;

(*b*) if so, what action has been taken by them in this behalf ?

A.—Sri H. SIDDAVEERAPPA (Minister for Home and Industries).—

(*a*) Yes.

(*b*) A Scheme for the expansion of the Cottage Industry, Smithy Centre at Malavalli and manufacture of cycle parts with assistance from the Government of India is being examined. The matter is under correspondence with them.

The starting of a Sugar Factory in the area has been examined by the Director of Industries and Commerce who has recommended that facilities admissible under the State Aid to Industries Act may be granted, if private enterprise were to take up this. This is also under examination.

ಶ್ರೀ ಎಂ. ಚಿಕ್ಕಲಿಂಗಯ್ಯ.—If private enterprise were to take up this ಎಂದು ಹೇಳಿದ್ದೀರಿ. Private enterprise ಎಂದರೆ ನಮ್ಮ part of the work ಏನು ಎಂಬುದನ್ನು ಹೇಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—Private enterpriseನವರು capital rise ಮಾಡಬೇಕು. ಇಂಥಿಂಥಾ ಇಂಡಸ್ಟ್ರೀಗೆ ಇಂಥಿಂಥಾ ಫೆಸಿಲಿಟೀಸ್ ಇದೆ, ಸಹಾಯ ಮಾಡಬೇಕು ಎಂದು ಕೇಳಿದರೆ ಏನು ಸಹಾಯ ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಉತ್ತರದ ಆಧಾರದ ಮೇಲೆ ಪ್ರಯತ್ನಪಡಬಹುದೇ?

Sri H. SIDDAVEERAPPA.—So far as a sugar factory is concerned, I cannot definitely say, for this reason. ಷ್ಯುಗರ್ ಫ್ಯಾಕ್ಟರಿ ಬೇಕು ಎಂದು ಕೇಳಿದ್ದಾರೆ. ಎಕ್ಸಾಮಿನ್ ಮಾಡಬೇಕೆಂದು ಹೇಳಿದ್ದೇವೆ. ಹೊಸ ಫ್ಯಾಕ್ಟರಿ ಆಗಬೇಕಾದರೆ ಗವರ್ನಮೆಂಟ್ ಆಫ್ ಇಂಡಿಯಾದವರ ಪರ್ಮಿಷ್ಷ್ ಬೇಕು, ಫೆಸಿಲಿಟೀಸ್ ಇಂಥಿಂಥಾದ್ದು ಇದೆ ಎಂದು ಹೇಳಿದರೆ ಗವರ್ನಮೆಂಟ್ ಆಫ್ ಇಂಡಿಯಾದವರಿಗೆ ಬರೆಯುತ್ತೇನೆ. ಪರ್ಮಿಷ್ಷ್ ಕೊಟ್ಟರೆ ಮುಂದುವರಿಯಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರನ್ನು ಕೇಳಿ ತಾನೆ ತೀರ್ಮಾನ ಮಾಡುವುದು?

ಶ್ರೀ ಎಚ್. ಸಿದ್ದವೀರಪ್ಪ.—ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರೂ, ನಾವೂ ಎಕ್ಸಾಮಿನ್ ಮಾಡಿದ್ದೇವೆ. ಷ್ಯುಗರ್ ಫ್ಯಾಕ್ಟರಿ ಪ್ರೈವೇಟ್ ಕ್ಯಾಪಿಟಲ್ ಮೇಲೆ ಪ್ರಾರಂಭಿಸುವುದಕ್ಕೆ ನಮ್ಮದೇನೂ ಆಭ್ಯಂತರ ವಿಲ್ಲ. ಒಂದು ಅಂಶ ಮಾತ್ರ ಪ್ಲಾಪಕದಲ್ಲಿಟ್ಟುಕೊಳ್ಳಬೇಕು. ಈಗಾಗಲೇ ಗವರ್ನಮೆಂಟ್ ಆಫ್ ಇಂಡಿಯಾದವರು ಇಡೀ ಸೌತ್ ಇಂಡಿಯಾಕ್ಕೆ ಆರು ಫ್ಯಾಕ್ಟರಿಗಳನ್ನು ಪ್ರಾರಂಭಿಸಬಹುದು ಎಂದು ಹೇಳಿದ್ದಾರೆ. ಭದ್ರಾವತಿಗೆ ಒಂದು ಕೊಟ್ಟಿದ್ದಾರೆ. ಆಮೇಲೆ ಬಳ್ಳಾರಿ ಜಿಲ್ಲೆಯಲ್ಲಿ ಇನ್ನೊಂದು ತೆಗೆಯಬೇಕೆಂದು ಒತ್ತಾಯ ಬರುತ್ತಾ ಇದೆ. ಆದ್ದರಿಂದ ಇತರ ಕಡೆಗಳಲ್ಲಿ ತೆಗೆಯುವುದಕ್ಕೆ ಎಷ್ಟು ಮಟ್ಟಿಗೆ ಸಾಧ್ಯವಿದೆ ಎಂಬುದು ಗವರ್ನಮೆಂಟ್ ಆಫ್ ಇಂಡಿಯಾದವರ ಪರ್ಮಿಷ್ಷ್ ಮೇಲೆ ಅವಲಂಬಿಸಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಾಳೆ ದಿವನ capital rise ಮಾಡಬೇಕಾದರೆ ಒಂದು ಆಧಾರ ಬೇಕಿಲ್ಲ. ಅದಕ್ಕೇ ಕೇಳುತ್ತಾ ಇದ್ದೇನೆ.

Sri H. SIDDAVEERAPPA.—Very well, I will write to the Government of India. I shall let you know whether they are prepared to give the required permission, if an application is given.

ಶ್ರೀ ಬಿ. ಹುಚ್ಚೇಗೌಡ.—ಈಗಾಗಲೇ ಮದರಾಸಿನಲ್ಲಿ ಮೂರು ಫ್ಯಾಕ್ಟರಿ ಸ್ಟಾರ್ಟ್ ಮಾಡುವುದಕ್ಕೆ ಗವರ್ನಮೆಂಟ್ ಆಫ್ ಇಂಡಿಯಾದವರ ಸ್ಯಾಂಕ್ಷ್ ಆಗಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಎನ್ನುವ ಅಂಕಿ ಅಂಶ ನನ್ನಲ್ಲಿಲ್ಲ. ಹೊಸ ಫ್ಯಾಕ್ಟರಿಗೆ ಪರ್ಮಿಷ್ಷ್ ಕೊಟ್ಟಿರುವುದು ಗೊತ್ತಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಭದ್ರಾವತಿಯಲ್ಲಿ ಫ್ಯಾಕ್ಟರಿ ಸ್ಟಾರ್ಟ್ ಮಾಡುವುದಕ್ಕೆ ಪರ್ಮಿಷ್ಷ್ ಕೊಟ್ಟಿದೆ ಎಂದು ಹೇಳಿದಿರಿ. ಅದು ಶಿವಮೊಗ್ಗಾಕ್ಕೆ ಅಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಭದ್ರಾವತಿಗೆ ಎಂದು ಹೇಳಲಿಲ್ಲವಲ್ಲ. By mistake ಆ ರೀತಿ ಹೇಳಿರಬಹುದು, ಅದು ಶಿವಮೊಗ್ಗಾ ಜಿಲ್ಲೆಗೆ.